S C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 256/2019

**ಚಾ.ಸಾ.-18 ಫ್ರಾ.ಸಾ.-17**

| | |
|---|---|
| **ಸಾಕ್ಷಿದಾರರ ಹೆಸರು** | **ಶ್ರೀ.ಚೆನ್ನಮಾರೇಗೌಡ** |
| **ತಂದೆಯ ಹೆಸರು** | **ಲೇಟ್ ಈರೇಗೌಡ** |
| **ವಯಸ್ಸು** | **65 ವರ್ಷಗಳು** |
| **ಉದ್ಯೋಗ** | **ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು** |
| **ವಾಸ** | **ಮೈಸೂರು** |

**ದಿನಾಂಕಃ 23.03.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾನು ದಿನಾಂಕಃ 19.07.2019 ರಿಂದ 31.05.2021 ರವರೆಗೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್ ಆಗಿ ಪಿ.ಡಬ್ಲ್ಯೂ.ಡಿ ಉಪ ವಿಭಾಗ, ಮಂಡ್ಯ ದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿಃ31.08.2019 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಈ ಪ್ರಕರಣದ ಕೃತ್ಯ ಸ್ಥಳದ ನಕ್ಷೆಯನ್ನು ತಯಾರಿಸಲು ಹಾಗೂ ನಷ್ಟದ ಅಂದಾಜು ಪಟ್ಟಿಯನ್ನು ತಯಾರಿಸಿ ಕೊಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿದೆ. ಅದರಂತೆ ಕೃತ್ಯ ಸ್ಥಳದ ನಕ್ಷೆಯನ್ನು ತಯಾರಿಸಲು ಚಾಸಾ- 17 ರವರನ್ನು ನೇಮಿಸಿ ಕಳುಹಿಸಿದ್ದು ಅದರಂತೆ ದಿಃ21.09.2019 ರಂದು ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಯ ಪೋಲೀಸ್ ಸಿಬ್ಬಂದಿ ಕೆ.ಕಾಳಯ್ಯರವರು ಚಾಸಾ--17 ರವರನ್ನು ಮಂಡ್ಯ ಸಿಟಿ ಗಾಂಧಿನಗರ 5ನೇಕ್ರಾಸ್

ವಾರ್ಡ್ ನಂ.13 ರಲ್ಲಿರುವ ಸ್ವತ್ತಿನ ಸಂಖ್ಯೆ:13-2-134-70ಎ ಬಳಿ ಕರೆದುಕೊಂಡು ಹೋಗಿ ಸದರಿಯವರು ನಕ್ಷೆಯನ್ನು ಮತ್ತು ನಷ್ಟದ ಅಂದಾಜು ಪಟ್ಟಿಯನ್ನು ತಯಾರಿಸಿರುತ್ತಾರೆ. ಸದರಿ ನಕ್ಷೆಯನ್ನು ಮತ್ತು ಅಂದಾಜು ಪಟ್ಟಿಯನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-22 ಮತ್ತು ನಿಪಿ- 24 ಎಂದು ಗುರುತಿಸಲಾಗಿದೆ. ನಿಪಿ- 24 ರಂತೆ ಸುಮಾರು ರೂ.67,707/- ನಷ್ಟ ಉಂಟಾಗಿರುವುದಾಗಿ ಕಂಡುಬರುತ್ತದೆ. ಸದರಿ ದಾಖಲೆಗಳನ್ನು ಚಾಸಾ- 17 ರವರು ನನ್ನ ಮುಂದೆ ಹಾಜರುಪಡಿಸಿದ್ದನ್ನು ನನ್ನ ಕವಚ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಕವಚ ಪತ್ರವನ್ನು ಈಗ ನೋಡುತ್ತಿದ್ದು ಈಗಾಗಲೇ ನಿಪಿ-25 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 25(ಎ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ:**

3) ನಾನು ಸದರಿ ಸ್ಥಳಕ್ಕೆ ಖುದ್ದು ಭೇಟಿ ನೀಡಿರುವುದಿಲ್ಲ. ಚಾಸಾ- 17 ರವರು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ನಿಪಿ- 22 ನಕ್ಷೆಯಲ್ಲಿ ಯಾವುದೇ ನಷ್ಟ ಉಂಟಾಗಿರುವ ಬಗ್ಗೆ ನಮೂದು ಇರುವುದಿಲ್ಲ. ತನಿಖಾಧಿಕಾರಿಗಳ ಕೋರಿಕೆಯಂತೆ ಸುಳ್ಳು ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

4) **ಮರು ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ